

ಮಧ್ಯಾಹ್ನದ ಹೊತ್ತು. ಸೂರ್ಯ ನೆತ್ತಿ ಮೇಲೆ ಸುಡುತ್ತಿದ್ದಾನೆ. ಪುಸ್ತಕ ಓದುತ್ತಾ ಶಾಮಣ್ಣ ಕೂತಿರೋ ಎತ್ತರದ ಗುಡ್ಡದಲ್ಲಿ ದಟ್ಟವಾದ ಮರಗಿಡ ಇರೋ ಕಾರಣ ತಣ್ಣಗೆ ಗಾಳಿ ಬೀಸ್ತಾ ಇದೆ. ಅದಕ್ಕಿಂತ ಸ್ವಲ್ಪ ಕೆಳಗೆ ಚಿಕ್ಕದೊಂದು ಗುಡ್ಡವನ್ನು ಹುಡುಗನೊಬ್ಬ ಕಷ್ಟ ಪಟ್ಟು ಹತ್ತಿ ತುದಿ ತಲುಪಿದ. ಇನ್ನೇನು ಕೆಳಗೆ ಹಾರ್ಬೇಕು ಅಷ್ಟರಲ್ಲಿ ಶಾಮಣ್ಣ, 'ಏ ಹುಡುಗಾ, ಅಲ್ಲಿಂದ ಹಾರಿದ್ರೆ ನೀ ಸಾಯೊಲ್ಲ. ಕೈಯೋ ಕಾಲೋ ಮುರ್ಕೊತೀಯ. ಅದರ ಬದ್ಲು ಇಲ್ಲಿ ಬಾ, ಇಲ್ಲಿಂದ ಹಾರಿದ್ರೆ, ಸಾವು ಗ್ಯಾರಂಟಿ.'

'ಯೋ... ಹೋಗಯ್ಯಾ... ನಿನಗ್ಯಾಕೆ ಬೇಕು ನನ್ ವಿಷಯ?'

'ಅಲ್ಲಪ್ಪಾ... ನನ್ ಮಾತು ಕೇಳು. ತುಂಬಾ ಜನಕ್ಕೆ ಬುದ್ಧಿ ಹೇಳಿದ್ದೀನಿ, ಅಲ್ಲಿಂದ ಹಾರ್ಬೇಡ್ರಯ್ಯಾ, ಸಾಯಲ್ಲ ಅಂತ. ಸೀದಾ ನರಕಕ್ಕೆ ಹೋಗ್ತೀಯಾ. ಸಾಯೋ ತನಕ ಬೆಡ್ಡಿನ್ ಮೇಲೆ ಒದ್ದಾಡೋದು ಬೇಕಾ? ಇಲ್ಲ, ಒಂದೇ ಸಲ ಸ್ವರ್ಗಕ್ಕೆ ಹೋಗ್‌ಬೇಕಾ. ಇಲ್ಲಿಂದ ಹಾರು, ಗ್ಯಾರಂಟಿ ಸಾಯ್ತೀಯಾ.'

ಹಂ... ಹುಡುಗ ಯೋಚ್ನೆ ಮಾಡ್ತಾನೆ, 'ಸರಿ, ಬಂದೆ' ಅಂತ ಕಷ್ಟ ಪಟ್ಟು, ಮೇಲೆ ಹತ್ತಿದ.

'ಏನು, ಎಸ್ಸೆಸ್ಸೆಲ್ಸಿ ಫೇಲಾ?'

'ನಿಮಗೆಂಗೆ ಗೊತ್ತಾಯ್ತು?'

'ಅಯ್ಯೋ, ನಾನು ಇಲ್ಲಿಗೆ ಮೂರು ಸಲ ಬಂದಿದ್ದೆ ಸಾಯಕ್ಕೆ.'

'ಮೂರು ಸಲ ಬಂದಿದ್ರಾ? ಯಾಕೆ ಸಾಯ್ಲಿಲ್ಲವ್ವಾ?'

'ಅದೊಂದು ದೊಡ್ಡ ಕಥೆ, ನೀನು ನಿನ್ ಕೆಲಸ ಮಾಡು, ನೀನು ಸಾಯಕ್ಕೆ ತಾನೆ ಬಂದಿದ್ದು? ನನ್ ಕಥೆ ಕಟ್ಕೊಂಡು ನಿಂಗೆ ಏನಾಗ್ಬೇಕು' ಹಾರು' ಅಂದ್ರು ಶ್ಯಾಮಣ್ಣ. 'ಇಲ್ಲ ಹೇಳಿ, ನಿಮ್ ಕಥೆ ಕೇಳಿ ಸಾಯ್ತೀನಿ' ಅಂದ ಹುಡುಗ.

ಅಷ್ಟರಲ್ಲಿ, ಮೇಲಿಂದ 'ರೀ... ಊಟ ತರ್ಲಾ. ಅನ್ನೋ ಹೆಣ್ಣು ಧ್ವನಿ.

'ಹೂಂ ತೊಗೊಂಡು ಬಾ' ಅಂತ ಉತ್ತರಿಸುತ್ತಾ ಶ್ಯಾಮಣ್ಣ, 'ಇವತ್ತು ಒಳ್ಳೆ ಮೀನು ಸಾರು ಮಾಡಿದ್ದಾಳೆ ನನ್ನ ಹೆಂಡತಿ.'

'ಓಹ್... ಯಾವ ಮೀನು ಅದು?'

'ಕಾಣೆ ಮೀನು.'

'ನಂಗೆ ಮೀನಂದ್ರೆ ತುಂಬಾ ಇಷ್ಟ.'

'ಸರಿ ಹಾಗಾದ್ರೆ. ನನ್ನ ಕಥೆ ಕೇಳಿ, ಊಟ ಮಾಡಿ, ಹಾರುವೆಯಂತೆ' ಅಂದ ಶ್ಯಾಮಣ್ಣನ ಮಾತು ಕೇಳಿ ಸಾಯುವುದನ್ನು ಮುಂದೂಡಿ ಹುಡುಗ ಕಥೆ ಕೇಳಲು ಕೂತ.

''ನಾನು ಯಾವಾಗ್ಲೂ ರ್‍ಯಾಂಕ್ ತಗೋತಿದ್ದವನು ಅವತ್ತು ಫೇಲ್ ಆಗಿದ್ದೆ. ಮನೇಲಿ, 'ನಾಲಾಯಕ್, ದರಿದ್ರದವನು, ಹೆಂಗಾದ್ರು ನಮ್ ಹೊಟ್ಟೆಯಲ್ಲಿ ಹುಟ್ಟಿದ್ಯೋ?' ಅನ್ನೋ ಮೂದಲಿಕೆ ಕೇಳಿ, ಸಹಿಸಕ್ಕಾಗದೆ, ನಾನು ಸತ್ತು ಅವರಿಗೆಲ್ಲಾ ಬುದ್ಧಿ ಕಲಿಸಬೇಕು ಅಂತ ತೀರ್ಮಾನಿಸಿ, ಇಲ್ಲಿಗೇ ಬಂದೆ. ಸಾಯಲೋ? ಬೇಡ್ವೋ? ಅಂತ ಯೋಚ್ನೆ ಮಾಡ್ತಾ ಸಂಜೆ ಆಯ್ತು. ಇನ್ನೇನು ಬಿದ್ದು ಸಾಯ್ಬೇಕು ಅನ್ನೋವಷ್ಟರಲ್ಲಿ, ಮನೆಯಿಂದ ಹುಡ್ಕೊಂಡು ನನ್ನ ಅಪ್ಪ ಬಂದ್ರು. 'ಇಲ್ಲಿದ್ದೀಯಾ ಮಗನೆ? ಬೆಳಗಿಂದ ಎಲ್ಲ ಕಡೆ ಹುಡುಕ್ಬಿಟ್ಟೆ ನಿನ್ನ, ನೀನು ರ್‍ಯಾಂಕ್ ತಗೊಂಡಿದೀಯ. ಸ್ಕೂಲ್‌ನಲ್ಲಿ, ಪಾಸ್ ಆದವರದ್ದು ಮಾತ್ರ ಲಿಸ್ಟ್ ಹಾಕಿರೋದಂತೆ. ರ್‍ಯಾಂಕ್ ತಗೊಂಡವರದ್ದು ಲಿಸ್ಟ್ ಹಾಕಿಲ್ವಂತೆ. ನಡಿ ಮನೆಗೆ' ಅಂದ್ರು.

ಖುಷೀಲಿ ಮನೆಗೆ ಹೋದೆ.

'ಎರಡನೇ ಸಾರಿ ಏನಾಯ್ತು?'

''ಅದು ಯಾವವನದ ಕಥೆ. ಎಲ್ಲ ಹುಡುಗರ ಥರಹ ನನಗೂ ಗಿರಿಜಾ ಅನ್ನೋ ಹುಡುಗಿಯ ಮೇಲೆ ಪ್ರೀತಿಯಾಯ್ತು. ಆದ್ರೆ, ಗಿರಿಜಾ ನಾ ಎಷ್ಟೇ ಪ್ರಯತ್ನ ಪಟ್ರೂ ನನ್ನ ಪ್ರೀತಿ ಒಪ್ಕೊಂಡಿರಲಿಲ್ಲ. ಅವಳಿಗೆ ಬೇರೆ ಹುಡ್ಗನೊಂದಿಗೆ ಮದುವೆ ಫಿಕ್ಸ್ ಆಯ್ತು ಅನ್ನೋ ಕಾರಣಕ್ಕೆ ಮತ್ತೆ ಇಲ್ಲಿಗೆ ಬಂದೆ. ಆಗಲೂ ಹಾರಬೇಕು ಅನ್ನೋವಷ್ಟರಲ್ಲಿ ಮನೆಯಿಂದ ಕಾಲ್ ಬಂತು. 'ಮಗಾ, ನೀನೇ ಬೇಕು ಅಂತ ಗಿರಿಜಾ ಮದುವೆ ಮಂಟಪ ಬಿಟ್ಟು ಓಡಿಬಂದಿದ್ದಾಳೆ' ಅಂತ ಅಮ್ಮ ಅಂದಾಗ, ನನ್ನ ಆನಂದಕ್ಕೆ ಪಾರವೇ ಇಲ್ಲ.

'ಅಮ್ಮಾ, ಈಗ್ಲೇ ಬಂದೆ' ಅಂತೇಳಿ, ಎದ್ದೆನೋ ಬಿದ್ದೆನೋ ಅಂತ ಮನೆ ಕಡೆ ಓಡಿದೆ. ಹೀಗೆ ಮತ್ತೊಮ್ಮೆ ನನ್ನ ಪ್ರಾಣ ಉಳೀತು.''

'ಅಲ್ಲ... ಎರಡು ಸಲಾನೂ ಇಲ್ಲಿಗೇ ಬಂದಿದೀರ! ಯಾಕೆ? ಈ ಜಾಗ ನಿಮ್ಮನೆಗೆ ಹತ್ರ ಇತ್ತಾ?'

'ಇಲ್ಲ, ದೂರಾನೇ ಇತ್ತು. ಇಲ್ಲಿಗೆ ಬರೊ ಮುಂಚೆ ಸಾಯೋಕ್ಕೆ ರೈಲು ಹಳಿಯ ಮೇಲೆ ಮಲಗಿದ್ದೆ. ನನ್ನ ಹಣೆಬರಹ ಏನೋ ಗೊತ್ತಿಲ್ಲ! ನಾನು ಮಲಗಿದ್ದ ಪಕ್ಕದ ಹಳಿಯ ಮೇಲೆ ರೈಲು ಹೋಯ್ತು. ಅದೆಲ್ಲಿದ್ದನೋ ರೈಲ್ವೇ ಗಾರ್ಡ್! ಓಡಿ ಬಂದವನೇ, ದರಿದ್ರದವನೆ, ನಿಂಗೆ ಸಾಯಕ್ಕೆ ಇದೇ ಜಾಗ ಬೇಕಾ? ನೀ ಸತ್ರೆ ನನ್ನ ಮೇಲೆ ಬರುತ್ತೆ ಅಂತ ರಪರಪಾಂತ ಹೊಡಿಯಕ್ಕೆ ಶುರು ಮಾಡಿದ. ಅವನಿಂದ ತಪ್ಪಿಸಿಕೊಂಡು ಇಲ್ಲಿಗೆ ಬಂದೆ.'

'ಮೂರನೇ ಸಲ ಏನಾಯ್ತು ಅಂತ ಹೇಳಲಿಲ್ಲ.'

'ಅದಾ? ನಾ ಗಿರಿಜಳನ್ನು ಮದುವೆ ಆದೆ, ಮಕ್ಕಳೂ ಆದವು. ಖರ್ಚು ಹೆಚ್ಚಾಯ್ತು. ದೇವನಹಳ್ಳಿಯಲ್ಲಿ ನಮಗಿದ್ದ ಹತ್ತು ಎಕರೆ ಭೂಮಿಯಲ್ಲಿ ಬೇಸಾಯ ಮಾಡಿಯೇ ಬದುಕುತ್ತಿದ್ದೆವು. ಸಾಲ ಮಾಡಿ ವ್ಯವಸಾಯ ಮಾಡಬೇಕಾಯ್ತು. ಆ ವರ್ಷ ಟೊಮ್ಯಾಟೊ ಬೆಳೆ ಬಹಳ ಚೆನ್ನಾಗಿಯೇ ಬಂದಿತ್ತು. ಬರೋ ಲಾಭದಲ್ಲಿ, ನನ್ನ ಸಾಲ ತೀರಿಸಿ, ಆರಾಮಾಗಿ ಇರಬಹುದು ಅನ್ನೋ ನಂಬಿಕೆಯಲ್ಲಿದ್ದೆ. ಆಗಿದ್ದೇ ಬೇರೆ. ಬೆಳೆಗೆ ತಕ್ಕ ಬೆಲೆ ಸಿಗಲಿಲ್ಲ. ಸಾಲಗಾರರ ಕಾಟ ನೆನಪಾಗಿ, ಮನಸ್ಸು ಸಾವಿನ ಬಗ್ಗೆ ಯೋಚನೆ ಮಾಡಿತು. ಅದಕ್ಕೆ ಮತ್ತೆ ಈ ಕಡೆ ಬಂದೆ.'

'ಹುಂ... ಆಮೇಲೆ?'

'ಇನ್ನೇನು ಹಾರಿ ಬೀಳಬೇಕು ಅನ್ನೋವಷ್ಟರಲ್ಲಿ, ಹೆಂಡತಿಯಿಂದ ಫೋನು – ರೀ, ನಮ್ಮ ಊರ್ ಹತ್ರ ವಿಮಾನ ನಿಲ್ದಾಣ ಆಗುತ್ತಂತೆ. ಯಾರೋ ಬಂದಿದ್ದಾರೆ, ಎಕರೆಗೆ ಒಂದು ಕೋಟಿಯಂತೆ, ಹತ್ತು ಕೋಟಿ ಕೊಡ್ತಾರಂತೆ... ಸರಿ ಅಂತ ಮನೆ ಕಡೆ ಓಡಿದೆ. ಆ ಜಮೀನು ಮಾರಿದ ದುಡ್ಡಲ್ಲಿ ನನ್ನ ಸಾಲ ತೀರಿಸಿ, ಈ ಗುಡ್ಡದ ಮೇಲೊಂದು ಮನೆ ಮಾಡಿ, ಸಾಯೋ ಯೋಚನೆ ಮಾಡೋ ಅದೆಷ್ಟೋ ಜನರನ್ನ ಉಳಿಸೋ ಕೆಲ್ಸ ಮಾಡ್ತಿದ್ದೀನಿ.'

ಅಷ್ಟರಲ್ಲಿ ಶಾರದಾ ಊಟ ತಂದಳು.

'ಬಾರಪ್ಪಾ ಊಟ ಮಾಡು, ಎಲ್ಲಾದಕ್ಕೂ ಸಾವೇ ಪರಿಹಾರವೇನಪ್ಪಾ? ಹಾಗಿದ್ದಿದ್ದೆ, ಇವತ್ತು ಈ ಭೂಮಿ ಮೇಲೆ ಯಾರೂ ಇರ್ತಿರ್ಲಿಲ್ಲ... ಮನೆಗೋಗಿ ಇನ್ನೂ ಸ್ವಲ್ಪ ಚೆನ್ನಾಗಿ ಓದಿ, ಮತ್ತೆ ಪ್ರಯತ್ನ ಮಾಡು.'

'ತೊಂಬತ್ತೊಂದು ಪರ್ಸೆಂಟ್ ತೊಗೊಂಡೆ. ಆದ್ರೆ ನನ್ನಪ್ಪಂಗೆ ರ್‍ಯಾಂಕೇ ಬೇಕಿತ್ತು. ನಾನು ವೇಸ್ಟ್ ಬಾಡಿ. ಅವರ ಆಸೆ ನುಚ್ಚು ನೂರು ಮಾಡ್ದೆ. ಅಪ್ರಯೋಜಕ, ನಾಲಾಯಕ್ಕು ಅಂತ ಹಂಗಿಸೋಕೆ ಶುರು ಮಾಡಿದ್ರು. ಅದಕ್ಕೆ ಸಾಯೋಣ ಅನ್ಕೊಂಡೆ.'

ಹುಡುಗ ಮಾತು ಮುಗಿಸುವ ವೇಳೆಗೆ ಆ ಹುಡುಗನ ಪೋಷಕರು ಅವನನ್ನು ಹುಡುಕುತ್ತಾ ಅಲ್ಲಿಗೆ ಬಂದರು.

'ಸಮಾಧಾನ ಮಾಡ್ಕೊಳ್ಳಿ. ರ್‍ಯಾಂಕ್ ಬರದೇ ಇದ್ರೆ ಜೀವನದಲ್ಲಿ ಸಕ್ಸಸ್ ಆಗೋದೆ ಇಲ್ಲ ಅಂದವರು ಯಾರು? ರ್‍ಯಾಂಕ್ ಒಂದೇ ಧ್ಯೇಯ ಅಲ್ಲ. ಜ್ಞಾನ ಎಲ್ಲಕ್ಕಿಂತ ಮುಖ್ಯ.'

ಶ್ಯಾಮಣ್ಣನ ಮಾತು ಕೇಳಿದ ಪೋಷಕರು, 'ನಿಮ್ಮ ಉಪಕಾರ ಯಾವತ್ತೂ ಮರೆಯಲ್ಲ' ಅಂತ ನಮಸ್ಕರಿಸಿದರು. 'ನಿಮ್ಮ ಆಶೀರ್ವಾದ ನನ್ನ ಮೇಲೆ ಸದಾ ಇರಲಿ' ಅಂತ ಪ್ರಾಣ ಉಳಿಸಿದವನ ಕಾಲಿಗೆ ನಮಸ್ಕರಿಸಿ ಪೋಷಕರ ಜೊತೆ ಹೊರಟ ಆ ಹುಡುಗ.

'ಬನ್ರೀ... ಇವತ್ತಿಂದು ಆಯ್ತಲ್ಲಾ? ಮನೆಗೆ ಹೋಗೋಣ.'

'ಇಲ್ಲ ಕಣೇ, ಇವತ್ತು ಎಸ್ಸೆಸ್ಸೆಲ್ಸಿ ರಿಸಲ್ಟು. ಹುಡುಗು ಬುದ್ಧಿಯ ಮಕ್ಕಳು ಮತ್ತೆ ಯಾರಾದ್ರೂ ಬಂದ್ರೂ ಬರಬಹುದು. ನೋಡೋಣ, ಸಂಜೆ ತನಕ ಕಾಯ್ತೀನಿ. ನೀನೂ ಕೂತ್ಕೊ ಬಾ' ಅಂತ ಪ್ರಾಣ ಉಳಿಸೋ ಕೆಲಸವನ್ನು ಶಾಮಣ್ಣ ಮುಂದುವರೆಸಿದರು. ■